


International Journal of Kannada Research
www.kannadajournal.com

**ISSN: 2454–5813**
IJKR 2022; 8(2): 10-13
© 2022 IJKR
www.kannadajournal.com
Received: 07-02-2022
Accepted: 09-03-2022

**ಡಾ.ಬಸವರಾಜ ಸುಂಕೇಶ್ವರ**
ಅತಿಥಿ ಉಪನ್ಯಾಸಕರು, ಕನ್ನಡ ವಿಭಾಗ ಸರಕಾರಿ ಪ್ರಥಮ ದರ್ಜೆ ಕಾಲೇಜು ಮಾನ್ವಿ ಜಿಲ್ಲೆ: ರಾಯಚೂರು

**Corresponding Author:**
**ಡಾ.ಬಸವರಾಜ ಸುಂಕೇಶ್ವರ**
ಅತಿಥಿ ಉಪನ್ಯಾಸಕರು, ಕನ್ನಡ ವಿಭಾಗ ಸರಕಾರಿ ಪ್ರಥಮ ದರ್ಜೆ ಕಾಲೇಜು ಮಾನ್ವಿ ಜಿಲ್ಲೆ: ರಾಯಚೂರು

# ನೆಲೆಯಿಲ್ಲದ ಅಲೆಮಾರಿಗಳು: ಬುಡ್ಗಜಂಗಮರು

**ಡಾ.ಬಸವರಾಜ ಸುಂಕೇಶ್ವರ**

ದೇಶದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ಹಲವಾರು ಅಲೆಮಾರಿ ಸಮುದಾಯಗಳಲ್ಲಿ ಬುಡ್ಗ ಜಂಗಮ ಅಲೆಮಾರಿ ಸಮುದಾಯವು ಒಂದಾಗಿದೆ. ಕರ್ನಾಟಕ, ಆಂಧ್ರ ಮತ್ತು ತೆಲಂಗಾಣ ಗಡಿಭಾಗಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಈ ಜನಾಂಗ ಮೂಲತ: ಆಂಧ್ರ ಪ್ರದೇಶದಿಂದ ವಲಸೆ ಬಂದವರಾಗಿದ್ದಾರೆ. ಇವರದು ಅಲೆಮಾರಿ ಜೀವನ. ಕಥೆ ಹೇಳುವ, ವೇಷಹಾಕುವ ಕಲೆಗಾರಿಕೆ ಇವರಿಗೆ ವಂಶಪರಂಪರೆಯಿಂದ ಬಂದದ್ದು. ಕಥೆ ಹೇಳಿ, ವೇಷಹಾಕಿ ಹೊಟ್ಟೆ ತುಂಬಿಸಿಕೊಳ್ಳುವ ಈ ಜನಾಂಗಕ್ಕೆ ಮೂಲ ನೆಲೆಯಿಲ್ಲ. ಸದಾ ಊರೂರು ತಿರುಗುತ್ತ ಗ್ರಾಮಗಳ ಹೊರ ವಲಯದಲ್ಲಿ ಗುಡಾರ ಹಾಕಿಕೊಂಡು ವಾಸಿಸುವ ಜನಾಂಗವಿದು. ಇವರಿಗೆ ಹುಟ್ಟಿದ ಊರು ಕೇಳಿದರೆ ಉತ್ತರ ಸಿಗುವುದಿಲ್ಲ. ಜೀವನದ ಗೊತ್ತು ಗುರಿಯಿಲ್ಲದ ಬುಡ್ಗಜಂಗಮರ ಸಾಕು ಪ್ರಾಣಿಗಳಾದ ಕುದುರೆ, ದನ–ಕರುಗಳೊಂದಿಗೆ ಊರೂರು ಅಲೆಯುತ್ತಾರೆ. ಕುದುರೆಗಳ ಮೇಲೆ ತಮ್ಮ ಗಂಟುಮೂಟ್ಟೆಗಳನ್ನು ಹೊರಿಸಿ ಊರಿಂದೂರಿಗೆ ತಿರುಗುತ್ತಾರೆ.

ಬುಡ್ಗಜಂಗಮ ಸಮುದಾಯ ಆಂಧ್ರ–ಕರ್ನಾಟಕ ಗಡಿ ಭಾಗದ ರಾಯಚೂರು, ಬಳ್ಳಾರಿ, ಕೊಪ್ಪಳ, ತುಮಕೂರು, ಕೋಲಾರ, ದಾವಣಗೆರೆ, ಬೆಂಗಳೂರು, ಬೆಳಗಾವಿ, ಧಾರವಾಡ, ವಿಜಯಪುರ, ಬಾಗಲಕೋಟೆ, ಬೀದರ, ಕಲಬುರಗಿ ಇತರೆ ಜಿಲ್ಲೆಗಳಲ್ಲಿ ನೆಲೆ ನಿಂತಿದ್ದಾರೆ. ಅಲ್ಲದೆ ನೆರೆಯ ಮಹಾರಾಷ್ಟ್ರ ರಾಜ್ಯದಲ್ಲೂ ಕಾಣ ಸಿಗುತ್ತಾರೆ. ಬುಡ್ಗಜಂಗಮರು ಬುರ್ರಕಥಾ ಮೇಳಗಳನ್ನು ನಡೆಸುವುದು, ಹಗಲುವೇಷ ಹಾಕುವುದು, ಹಸ್ತ ನೋಡಿ ಭವಿಷ್ಯ ಹೇಳುವುದು ಮತ್ತು ಭಿಕ್ಷೆ ಬೇಡುವುದು ಇತ್ಯಾದಿ ಕಲೆಗಾರಿಕೆಯಿಂದ ಜೀವನ ಸಾಗಿಸುತ್ತಾರೆ. ಬಹುರೂಪಿ, ವೇಷಗಾರರು, ಬಾಲಸಂತರು, ಹಗಲುವೇಷಗಾರರು, ಬುರ್ರ ಕಥೆಯವರು, ಕೊಂಡಮಾಮ, ಕುರುಕುರುಮಾಮ ಮತ್ತು ಬೈರಾಗಿಗಳು ಇತ್ಯಾದಿ ಹೆಸರುಗಳಿಂದ ಕರೆಯಿಸಿಕೊಳ್ಳುವರು. ಬುಡ್ಗ ಜಂಗಮರು ಈ ಮೊದಲು ಕಾಡಿನಲ್ಲಿ ಸ್ವಚ್ಛಂದವಾಗಿ ಕಾಲ ಕಳೆಯುತ್ತಿದ್ದರು. ಆದರೆ ಇಂದು ಕಾಡು–ನಾಡು ಎರಡನ್ನು ಕಳೆದುಕೊಂಡು ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಇತ್ತ ಆಧುನಿಕ ಬದುಕಿಗೂ ಹೊಂದಿಕೊಳ್ಳಲಾಗಿದೆ, ಅತ್ತ ತಮ್ಮ ಮೂಲ ಕಲೆ ಮತ್ತು ಸಂಸ್ಕೃತಿಯನ್ನು

ಬುಡ್ಗಜಂಗಮರನ್ನು ಪ್ರಾದೇಶಕವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯುವರು. ಬೆಳಗಾವಿ, ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಬಹುರೂಪಿ, ಸಿದ್ಧರು, ಹಗಲು ವೇಷಗಾರರು, ಕುರುಕುರುಮಾಮ ಎಂದು ಕರೆಯುತ್ತಾರೆ. ಹಾಗೆಯೇ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಕೋಲಾರ, ಹಾಸನ ಮತ್ತು ಹಳೆಯ ಮೈಸೂರು ಪ್ರಾಂತ್ಯದಲ್ಲಿ; ಸನ್ಯಾಸಿ, ಜಗ್ಗಾಲಿ, ಬಾವಚ, ಬಾಬಾಬುಡರು, ಪಿರಿಕಿ ಜಂಗಾಲು, ಶಿವಜಂಗಾಲು, ಪರಿಜಂಗಾಲು, ಕಾಟಿಪಾಪಲು, ಕಥಗಾಳ್ಳು, ಗಣಾಯತ, ಜಂಗಾಲು, ಶ್ರೀಜಂಗಾಲು, ವೇಷಗಾಳ್ಳು, ಪಂಚಗಾಳ್ಳು ಮತ್ತು ಬೀದಿ ಭಾಗವತಲು ಎಂಬ ಇತ್ಯಾದಿ ನಾಮಾಂಕಿತದಿಂದ ಕರೆಯುತ್ತಾರೆ. ಹಾಗೆಯೇ ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ (ಈಗಿನ ವಿಜಯನಗರ ಸೇರಿದಂತೆ) ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಹಗಲು ವೇಷಗಾರರು, ಬುರ್ರಕಥೆಯವರು, ಕೊಂಡಮಾಮ ಎಂತಲು ಕರೆಯಲ್ಪಡುವರು. ಇವರು ಊರೂರು ತಿರುಗಿ ಕಥೆ ಹೇಳುವ ಸಮಯದಲ್ಲಿ ಆಯಾ ಜನರ ಭಾಷೆ, ಪರಿಸರ, ಅವರ ನಡವಳಿಕೆ ಅನುಸಾರ ಕಥೆ ಬಿಚ್ಚುತ್ತಾರೆ. ಅಂದಿನ ಕಥೆ ಮುಗಿದ ಮೇಲೆ ಇನ್ನೊಂದು ಕಥೆಗೆ ಒಪ್ಪಿಗೆ (ಮಾತು) ಕೊಟ್ಟು, ಅಲ್ಲಿಂದ ಬೇರೆ ಊರಿಗೆ ಪ್ರಯಾಣ ಬೆಳೆಸುವ ಪರಿಪಾಠವಿರುತ್ತದೆ. ಬುಡ್ಗಜಂಗಮರು ಒಂದೂರಿನಿಂದ ಮತ್ತೊಂದೂರಿಗೆ ಕಥೆ ಹೇಳುತ್ತ, ಅಲೆಯುತ್ತ ತಮ್ಮ ಗುಡಾರಗಳನ್ನು ಬದಲಾಯಿಸುವುದು ಸಾಮಾನ್ಯವಾಗಿರುತ್ತದೆ. ಹೀಗೆ ಊರೂರುಗಳಿಗೆ ತಿರುಗುವುದನ್ನೇ ಅವರು 'ದೇಶ ತಿರುಗುವ ಕೆಲಸ' ಎಂದು ಹೇಳುತ್ತಾರೆ.

**ಜನಾಂಗದ ಹಿನ್ನೆಲೆ**

ಒಂದು ಕಾಲದಲ್ಲಿ ಕಾಡಿನಲ್ಲಿ ಬೇಟೆಯಾಡುವುದೇ ತಮ್ಮ ಮುಖ್ಯ ಕುಲಕಸುಬನ್ನಾಗಿ ಮಾಡಿಕೊಂಡಿದ್ದ ಬುಡ್ಗಜಂಗಮರು ಆಂಧ್ರಪ್ರದೇಶದಿಂದ ವಲಸೆ ಹೊರಟು ಕರ್ನಾಟಕ ಮತ್ತು ಮಹಾರಾಷ್ಟ್ರಗಳಿಗೆ ಗುಳೆ ಬಂದರೆಂದು ಸಂಶೋಧಕರು ಸಾಬೀತು ಪಡಿಸಿದ್ದಾರೆ. ಅಲ್ಲದೆ ತಮಿಳುನಾಡಿನ ಗಡಿಭಾಗಗಳಲ್ಲಿ ಬಾಬಾಬುಡರು, ಬಾಗೋತಕಥೆ ಹೇಳುವವರು, ಶಾಸ್ತ್ರದವರು ಮತ್ತು ಗೊರಮಯ್ಯಿಗಳು ಎಂದು ಕರೆಯಲ್ಪಡುವರು. ತಮ್ಮ ಅಲೆಮಾರಿ ಜೀವನದಲ್ಲಿ ತುತ್ತಿನ ಚೀಲ ತುಂಬಿಕೊಳ್ಳಲು ವಿವಿಧ ವೃತ್ತಿಗಳಲ್ಲಿ ತೊಡಗಿದರು. ಆರಂಭದಲ್ಲಿ ಕಾಡು ಮತ್ತು ಕಾಡನಂಚಿನ ಆಶ್ರಯ ಪಡೆದು ಕಾಡಿನಿಂದ ಹೊರ ಬಂದ ನಂತರ ಜೀವನ ನಿರ್ವಹಣೆಗಾಗಿ ಹಲವು ವೇಷಗಳನ್ನು ಹಾಕಿಕೊಂಡು, ಅನೇಕ ರೀತಿಯ ಪ್ರದರ್ಶನಗಳನ್ನು ನೀಡುತ್ತ ಕಾಲಕ್ರಮೇಣ ನಾಡಿಗೆ ಬಂದು ನೆಲೆಸಿದರು. ಮರಾಠರ ಛತ್ರಪತಿ ಶಿವಾಜಿ ಮಹಾರಾಜನ ಕಾಲದಲ್ಲಿ ಇವರು ಗೂಢಾಚಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು. 12ನೇ ಶತಮಾನದಲ್ಲಿ ಬಸವಾದಿ ಪ್ರಮಥರು 'ಶರಣ ಧರ್ಮ' (ವಚನ ಧರ್ಮ) ಪ್ರಚಾರಕ್ಕಾಗಿ ಇವರನ್ನು ಬಳಸಿಕೊಂಡರು. ಇವರು ಶೈವ ಸಂಸ್ಕೃತಿಯನ್ನು ಅಪ್ಪಿಕೊಂಡು ಶಿವನ ಆರಾಧಕರಾದರು. ಅದುದರಿಂದ ಸಿರಿಗಿರಿ, ಗಂಧಂ, ಧೂಪಂ, ಪಾರ್ವತಂ, ವಿಭೂತಿ, ಪ್ರಸಾದಂ, ರುದ್ರಾಕ್ಷಲು ಮತ್ತು ಪೈರ ಎಂಬ ಬೆಡಗು(ಗೋತ್ರ)ಗಳನ್ನು ಇವರಲ್ಲಿ ಕಾಣಬಹುದು. ಕಾಲಾಂತರದಲ್ಲಿ ಕೆಲವರು ವೈಷ್ಣವ ಮತ ಪ್ರಚಾರ ಮತ್ತು ಪ್ರಭಾವಕ್ಕೆ ಒಳಗಾದರೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

**ಸಾಮಾಜಿಕ ಜೀವನ**

ಅಲೆಮಾರು ಬುಡ್ಗಜಂಗಮರಲ್ಲಿ ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ನಂಬಿಕೆ, ಆಹಾರ ಕ್ರಮ, ವಿವಾಹ ಪದ್ಧತಿ, ಕಲೆ ಸಂಸ್ಕೃತಿ ಮತ್ತು ನ್ಯಾಯ ಪದ್ಧತಿ ವಿಶಿಷ್ಟವಾಗಿರುವುದು ಕಾಣುತ್ತೇವೆ. ಸಾಮಾಜಿಕವಾಗಿ ಈ ಜನಾಂಗದವರಲ್ಲಿ ಪುರುಷರ ಪ್ರಾಬಲ್ಯ ಇರುವುದರಿಂದ ಕುಟುಂಬದ ಮುಖ್ಯಸ್ಥ ಪುರುಷನೇ ಆಗಿರುತ್ತಾನೆ. ಈ ಮೊದಲು ಇವರಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಇತ್ತಾದರೂ, ಕಾಲಕ್ರಮೇಣ ವಿಘಟಿತ ಕುಟುಂಬಗಳಾದವು. ವಿಭಕ್ತ ಕುಟುಂಬ ವ್ಯವಸ್ಥೆ ಜಾರಿಯಲ್ಲಿದ್ದರೂ ಈಗಲೂ ಎಲ್ಲ ಕುಟುಂಬಗಳು ಒಂದೆಡೆ ಕೂಡಿ ಬಾಳುತ್ತಾರೆ. ಧಾರ್ಮಿಕವಾಗಿ ಇವರು ಗಂಡು-ಹೆಣ್ಣು ದೇವರುಗಳನ್ನು ಆರಾಧಿಸುತ್ತಾರೆ. ಇವರ ಉಡುಗೆ-ತೊಡುಗೆಗಳು ದಿನಂಪ್ರತಿ ಸಾಮಾನ್ಯರಂತೆ ವೇಷಭೂಷಣಗಳನ್ನು ಧರಿಸುವರು. ಸಭೆ, ಸಾರ್ವಜನಿಕರ ಭೇಟಿ, ವಿಶೇಷ ಸಮಾರಂಭ, ಹಬ್ಬ-ಉತ್ಸವ, ಜಾತ್ರೆ ಮತ್ತು ಪ್ರದರ್ಶನ ಕಲೆಗಳ ಸಮಯದಲ್ಲಿ ಉಡುಗೆ-ತೊಡುಗೆಗಳಲ್ಲಿ ವ್ಯತ್ಯಾಸ ಕಾಣುತ್ತೇವೆ. ಬಿಳಿಧೋತ್ರ, ಬಿಳಿ ನಿಲುವಂಗಿ, ಮೇಲೊಂದು ಕರಿಕೋಟ್, ತಲೆಗೆ ರುಮಾಲು, ಬೆರಳಲ್ಲಿ ಉಂಗುರ, ಕೈಗಡಿಯಾರ, ಕಿವಿಯಲ್ಲಿ ಮುರುವು, ಹಣೆಗೆ ವಿಭೂತಿ, ಕುಂಕುಮ, ಗಂಧ, ಕೊರಳಲ್ಲಿ ರುದ್ರಾಕ್ಷಿ ಮಾಲೆ ಮತ್ತು ಕವಡೆಸರ ಹಾಕಿಕೊಳ್ಳುತ್ತಾರೆ.

ಇವರ ಆಹಾರ ಪದ್ಧತಿ ಕೂಡ ಭಿನ್ನವಾಗಿ ಕಂಡು ಬರುತ್ತದೆ. ಮೂಲತ: ಇವರು ವ ಮಾಂಸಾಹಾರಗಳು. ತಮ್ಮ ಆಹಾರಕ್ಕೆ ಬೇಕಾದ ಪ್ರಾಣಿ, ಪಕ್ಷಿಗಳನ್ನು ಬೇಟೆಯಾಡುವುದು ಇವರ ಮುಖ್ಯ ಪ್ರವೃತ್ತಿ. ಬೇಟೆಯಾಡಿದ ಪ್ರಾಣಿ, ಪಕ್ಷಿಗಳನ್ನು ಬೇಯಿಸಿಕೊಂಡು ತಿನ್ನುತ್ತಾರೆ. ಕೆಲವೊಮ್ಮೆ ಸುಟ್ಟು ತಿನ್ನುವ ಪದ್ಧತಿಯು ಉಂಟು. ಕೆಲವು ಪಕ್ಷಿಗಳ ರಕ್ತವನ್ನು ನೇರವಾಗಿ ಕುಡಿಯುವ ಅಭ್ಯಾಸವೂ ಇದೆ. ಇವರು ಗುಂಪು ಬೇಟೆ ಮಾಡುತ್ತಾರೆ. ಸಾಮಾನ್ಯವಾಗಿ ಉಡ, ಮುಂಗುಸಿ, ಕಾಡು ಇಲಿ, ಅಳಿಲು, ಕಾಡುಬೆಕ್ಕು, ಪುನುಗುಬೆಕ್ಕು, ಮೊಲ, ಕೌಜುಗ, ಕೊಕ್ಕರೆ, ನೀರುಕೋಳಿ, ಬಾತುಕೋಳಿ, ಕಾಡುಹಂದಿ, ಆಮೆ, ಮೀನು ಮತ್ತು ಏಡಿ ಇತ್ಯಾದಿ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡುತ್ತಾರೆ. ಬೇಟೆಯಾಡಿದ ಪ್ರಾಣಿಗಳ ಮಾಂಸವನ್ನು ಕುಟುಂಬದ ಸದಸ್ಯರ ಸಂಖ್ಯೆಗೆ ತಕ್ಕಂತೆ ಪಾಲು ಮಾಡಿಕೊಳ್ಳುತ್ತಾರೆ. ಮದುವೆ ಆದವರಿಗೆ ಒಂದು ಪಾಲು, ಗಂಡನಿಲ್ಲದ ಹೆಂಗಸಿಗೆ ಇಂತಿಷ್ಟು, ಮಕ್ಕಳಿದ್ದವರಿಗೆ ಇಂತಿಷ್ಟು ಎಂದು ಪಾಲು ಹಾಕುತ್ತಾರೆ. ಇವರಿಗೆ ಪ್ರತಿದಿನ ಮಾಂಸಾಹಾರ ಬೇಕೇಬೇಕು. ಕೊನೆ ಪಕ್ಷ ಊಟಕ್ಕೆ ನಂಜಿಕೊಳ್ಳಲು ಮೀನು ಸಾರಾದರು ಇರಬೇಕು; ಅಷ್ಟೊಂದು ಮಾಂಸ ಪ್ರಿಯರು. ಊಟ ಮಾಡುವ ಮೊದಲು ಮಾಂಸಾಹಾರ ದೇವರಿಗೆ ಭಕ್ತಿಯಿಂದ ಅರ್ಪಿಸಿ, ನಂತರ ಊಟ ಮಾಡುವುದು ಇವರ ವಾಡಿಕೆ. ಮಾಂಸಾಹಾರ ಜತೆಗೆ ಮದ್ಯಪಾನ ಇವರ ಎಲ್ಲ ಕಾರ್ಯಗಳಲ್ಲಿ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಇವುಗಳಿಲ್ಲದೆ ಯಾವುದೇ ಶುಭ-ಅಶುಭಕಾರ್ಯಗಳು ನಡೆಯಲಾರವು.

ಇನ್ನು ಇವರ ವೈದ್ಯ ಪದ್ಧತಿ ಕೂಡ ವಿಶಿಷ್ಟವಾಗಿದೆ. ಕೆಲವು ಪ್ರಾಣಿ-ಪಕ್ಷಿಗಳ ರಕ್ತವನ್ನು ವಿವಿಧ ರೋಗಗಳ ಚಿಕಿತ್ಸೆಯಲ್ಲಿ ಇವರು ಬಳಸುತಾರೆ. ಉದಾಹರಣೆಗೆ, ಅಳಿಲು ರಕ್ತವನ್ನು ಕೆಮ್ಮಿಗಾಗಿ, ರತ್ನಪಕ್ಷಿ ಮತ್ತು ಪಾರಿವಾಳಗಳ ರಕ್ತವನ್ನು ಪಾರ್ಶ್ವವಾಯು, ವಾಯು ಚಿಕಿತ್ಸೆಗೆ ಉಪಯೋಗಿಸುವರು. ಉಡದತುಪ್ಪವನ್ನು ಸೊಂಟನೋವು, ಕೀಲುನೋವುಗಾಗಿ ಉಪಯೋಗಿಸುತ್ತಾರೆ. ಇವರು ಉತ್ತಮ ಕರಕುಶಲಕರ್ಮಿಗಳು ಹೌದು. ಬೇಟೆಗಾಗಿ ಬೇಕಾಗುವ ವಿವಿಧ ರೀತಿಯ ಬಲೆಗಳನ್ನು ಹೆಣೆಯುವುದರಲ್ಲಿ ನಿಸ್ಸೀಮರು. ಕೌಜುಗ, ಕಾಡು ಬೆಕ್ಕು, ಮೊಲ ಹಿಡಿಯಲು ಹೆಣೆಯುವ ಬಲೆ, ಸಾಕಿದ ಕೌಜುಗದ ಪಕ್ಷಿಯನ್ನು ಪಳಗಿಸಲುಬೇಕಾದ ಕೌಶಲ್ಯ, ಕ್ಯಾಟರ್ ಬಿಲ್ಲು ಮತ್ತು ಕ್ಯಾಲ ಬಿಲ್ಲುಗಳು ಸೇರಿದಂತೆ ಬೇಟೆಗಾರಿಕೆಗೆ ಬೇಕಾಗುವ ಎಲ್ಲ ಪರಿಕರಗಳನ್ನು ಇವರೇ ತಯಾರಿಸಿ ಕೊಳ್ಳುತ್ತಾರೆ. ಇವರಲ್ಲಿ ವೈವಾಹಿಕ ಜೀವನಕ್ಕೆ ಸಂಬಂಧಿಸಿದಂತೆ ಬಾಲ್ಯ ವಿವಾಹಗಳು ಮೊದಲೆಲ್ಲ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿದ್ದವು. ಶಿಕ್ಷಣದಿಂದ ತಿಳಿವಳಿಕೆ ಬಂದು ಇತ್ತೀಚೆಗೆ ಕಡಿಮೆಯಾಗಿದೆ. ಹಿಂದೆಲ್ಲ ವಿವಾಹ ಕಾರ್ಯಗಳು ಇವರಲ್ಲಿ ಐದು ದಿನಗಳವರೆಗೆ ಜರುಗುತ್ತಿದ್ದವು. ನಾಗರಿಕ ಸಮಾಜದಲ್ಲಿ ರೂಢಿಯಲ್ಲಿರುವ ವಿವಾಹ ವಿಚ್ಛೇದನ ಪದ್ಧತಿ ಮೊದಲಿಂದಲೂ ಜಾರಿಯಲ್ಲಿದೆ. ಕುಲನ್ಯಾಯ ಪದ್ಧತಿಯಲ್ಲಿ ವಿಚ್ಛೇದನಕ್ಕೆ ಅನುಮತಿ ದೊರೆತರೆ, ವಿಚ್ಛೇದಿತ ಮಹಿಳೆ ಮರುಮದುವೆ ಮಾಡಿಕೊಳ್ಳಲು ಅವಕಾಶವಿದೆ.

ಬುಡ್ಗಜಂಗಮರಲ್ಲಿ ತಮ್ಮ ಸಮುದಾಯದ ಒಳಗೆ ನಡೆಯುವ ವ್ಯಾಜ್ಯಗಳನ್ನು ಪರಿಹರಿಸಲು ಕುಲ ಪಂಚಾಯತಿ ವ್ಯವಸ್ಥೆ ಇದೆ. ಇದನ್ನು ಅವರು 'ಕುಲಮ ನ್ಯಾಯ' ಎಂದು ಕರೆಯುವರು. ಭಾಷಿಕವಾಗಿ ಇವರು ಶುದ್ಧ ಆಂಧ್ರ ಭಾಷೆಯಲ್ಲದ ತೆಲುಗು ಭಾಷೆಯನ್ನು ಆಡುತ್ತಾರೆ. ಇವರ ಕುಲ ಪಂಚಾಯಿತಿಯಲ್ಲಿ ಏಳು ವಿಧಗಳಿವೆ. ಪ್ರತಿಯೊಂದು ನ್ಯಾಯ ನಿರ್ಣಯಕ್ಕೂ ಇಂತಹ ತಪ್ಪಿಗೆ ಇಂತಿಷ್ಟು ದಂಡ ಎಂಬ ಮೌಖಿಕ ಸಂವಿಧಾನ ಇವರಲ್ಲಿದೆ. ಈ ಜನಾಂಗದ ಕುಲ ಪಂಚಾಯಿತಿಯ ವಿಶೇಷವೆಂದರೆ, ತಪ್ಪು ಮಾಡಿದವರಿಗೆ ದಂಡ ವಿಧಿಸಿದ ನಂತರ ನ್ಯಾಯ ಹೇಳಿದ ಮತ್ತು ತಪ್ಪು ಮಾಡಿದ ಇಬ್ಬರನ್ನು ಕೈಹಿಡಿಸಿ ಅವರಿಬ್ಬರಿಂದ ಕೋಪದಲ್ಲಿ ಮಾನಸಿಕ ಸ್ಥಿಮಿತತೆ ಕಳೆದುಕೊಂಡು ನಾವು ತಪ್ಪು ಮಾಡಿವೆಂದು ತಪ್ಪು ಒಪ್ಪಿಸುವರು. ಇನ್ನು ಮುಂದೆ ಯಾವುದೇ ರೀತಿ ತಪ್ಪುಗಳನ್ನು ಮಾಡುವುದಿಲ್ಲವೆಂದು ಹೇಳಿಸಿ ಇಬ್ಬರನ್ನು ರಾಜಿ ಮಾಡಿಸುತ್ತಾರೆ. ಇನ್ನು ಕೊಲೆ, ಅತ್ಯಾಚಾರ ಇನ್ನಿತರ ಕ್ರಿಮಿನಲ್ ಪ್ರಕರಣಗಳನ್ನು ಮಾಡಿ, ಪೊಲೀಸ್ ಠಾಣೆ, ನ್ಯಾಯಾಲಯ

ಮೆಟ್ಟಿಲು ಏರಿ ವಿಚಾರಣೆಯಿಂದ ದೋಷಮುಕ್ತರಾಗಿ ಹೊರಬಂದ ನಂತರದಲ್ಲೂ ಅಪರಾಧಿಗಳನ್ನು ನ್ಯಾಯ ಪಂಚಾಯತಿ ಸೇರಿಸುತ್ತಾರೆ. ಅಪರಾಧದ ಆಧಾರ ಮೇಲೆ ಕುಲ ಪಂಚಾಯತಿ ಅಪರಾಧಿಗಳಿಗೆ ದಂಡ ವಿಧಿಸುತ್ತದೆ. ಅಪರಾಧ ಎಸಗಿದವರು ತಪ್ಪಾಯಿತೆಂದು ಎಲ್ಲರ ಮುಂದೆ ಹೇಳಿ, ಪಂಚಾಯತಿ ಸಭೆಗೆ ಕೈಮುಗಿದು ಬೇಡಿಕೊಳ್ಳಬೇಕೆಂಬ ಕಟ್ಟುನಿಟ್ಟಿನ ಕರಾರುವಿದೆ.

ಹಾಗೆಯೇ ಈ ಸಮುದಾಯದ ಮಹಿಳೆಯರು ಈಚಲು ಗರಿಯಿಂದ ಚಾಪೆ, ಕಸಬರಗೆ ಹೆಣೆಯುವುದು, ಜೋಳಿಗೆ ಮತ್ತು ಕೌದಿಗಳನ್ನು ಹೊಲಿಯುವುದರಲ್ಲಿ ಪರಿಣಿತರು. ಹಚ್ಚೆ ಹಾಕಿಸಿಕೊಳ್ಳುವುದು ಈ ಜನಾಂಗದ ಸ್ತ್ರೀ–ಪುರುಷರಿಬ್ಬರಿಗೂ ಪಂಚಪ್ರಾಣ. ಸ್ತ್ರೀಯರು ಕೆನ್ನೆ, ಗದ್ದ, ಕೈ–ಕಾಲುಗಳಿಗೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಹಣೆ ಮೇಲೆ ಚುಕ್ಕಿ, ಕೈ ಮೇಲೆ ರಥ, ಕಣ್ಣು, ಗರುಡಪಕ್ಷಿ, ನಾಗರಹಾವು, ಆಂಜನೇಯ, ಬೇತಾಳ ಮತ್ತು ಅವರವರಿಗೆ ಪ್ರಿಯರಾದವರ ಹೆಸರುಗಳನ್ನು ಹಚ್ಚೆ ಹಚ್ಚಿಸಿಕೊಳ್ಳುವ ಪದ್ಧತಿ ರೂಢಿಯಲ್ಲಿದೆ. ತಮ್ಮ ಸಮುದಾಯದ ಕಲಾ ಪರಂಪರೆ ಉಳಿಸಿ ಬೆಳೆಸಿ ಪೋಷಿಸಿಕೊಂಡು ಬರುವಲ್ಲಿ ತಮ್ಮದೇ ಆದ ಬಹುಮುಖ್ಯ ಪಾತ್ರ ಹೊಂದಿದ್ದಾರೆ.

**ಪ್ರದರ್ಶನ ಕಲೆಗಳು:**

ಜೀವನೋಪಾಯಕ್ಕಾಗಿ ಊರೂರು ತಿರುಗುವ ಬುಡ್ಗಜಂಗಮರು ಒಂದೇ ಊರಿನಲ್ಲಿ 15 ರಿಂದ 20 ದಿನಗಳವರೆಗೂ ನೆಲೆಸುತ್ತಾರೆ. ಆ ಗ್ರಾಮದ ಮುಖಂಡರ ವಿಶ್ವಾಸದಿಂದ ಬಿಡಾರ(ಟೆಂಟ್)ಗಳನ್ನು ಹಾಕಿಕೊಂಡು, ಸುತ್ತಮುತ್ತಲಿನ ಹಳ್ಳಿಗಳಿಗೆ ತೆರಳಿ ಬುರ್ರಕಥೆ, ಕೇಳಿಕೆ ಶಾಸ್ತ್ರ, ವೇಷ, ನೃತ್ಯ, ಗಾಯನ, ಕಥೆ, ಮಹಾಕಾವ್ಯಗಳು, ಭವಿಷ್ಯ ಹೇಳುವುದು ಒಳಗೊಂಡಂತೆ ಆಯಾ ಪ್ರದೇಶಕ್ಕೆ ತಕ್ಕಂತೆ ಕಲೆಗಳನ್ನು ಮೈಗೂಡಿಸಿ ಕೊಂಡಿರುತ್ತಾರೆ. ಹಿಂದಿನ ಕಾಲದಲ್ಲಿ ಮನರಂಜನೆಗಾಗಿ ಇಂದಿನಂತೆ ಆಧುನಿಕ ಮಾಧ್ಯಮಗಳು ಇಲ್ಲದಿದ್ದಾಗ ಇವರನ್ನು ಹಳ್ಳಿಯವರು ಜಾತ್ರೆ, ಹಬ್ಬ ಇತ್ಯಾದಿ ಕಾರ್ಯಗಳಿಗೆ ಕರೆಯಿಸಿ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೆರವೇರಿಸುತ್ತಿದ್ದರು. ಹಗಲಿನಲ್ಲಿ ಪುರುಷರು ರಾಮಾಯಣ, ಮಹಾಭಾರತ ಮತ್ತು ಸಾಮಾಜಿಕ ವೇಷಗಳನ್ನು ಧರಿಸಿ, ಊರಿನ ಪ್ರತಿಯೊಂದು ಮನೆಯ ಮುಂದೆ ಎಲ್ಲ ರೀತಿಯ ಪ್ರದರ್ಶನ ನೀಡಿದ ಮೇಲೆ, ಕೊನೆಯಲ್ಲಿ ಮನೆ ಮನೆಗೆ ಭಿಕ್ಷೆ ಕೇಳುತ್ತಾರೆ. ಇವರು ಬೀದಿನಾಟಕಗಳನ್ನು ಆಡುವುದರಲ್ಲೂ ಪಾರಂಗತರು. ಕೆಲವರು ಕೈಯಲ್ಲಿ ತಂಬೂರಿ ಮತ್ತು ಚಿಟಿಕೆಗಳನ್ನು ಹಿಡಿದು, ಅಕ್ಕನಾಗಮ್ಮ, ಬಾಲನಾಗಮ್ಮ ಸೇರಿದಂತೆ ಹಲವು ಕಥೆಗಳನ್ನು, ಕೈವಾರ ತಾತಪ್ಪಯ್ಯನ ತತ್ವಪದಗಳನ್ನು ಮನೆಗಳ ಮುಂದೆ ಹಾಡಿ ಭಿಕ್ಷೆ ಬೇಡುತ್ತಾರೆ.

ಬುಡ್ಗಜಂಗಮರು ಪಾರಂಪರಿಕ ವೃತ್ತಿ ಕಲಾವಿದರು. ಇವರಲ್ಲಿ ಅಪಾರವಾದ ಅಲಿಖಿತ ಜನಪದ ಸಾಹಿತ್ಯ ಗಣಿಯೇ ಇದೆ. ಜಾನಪದ ಕಲಾ ಪ್ರಕಾರಗಳಲ್ಲಿ ಒಂದಾದ ಬುರ್ರಕಥೆಗೆ ಇವರೇ ವಾರಸುದಾರರು ಹಾಗೂ ರಾಯಭಾರಿಗಳು. ತಾತ ಮುತ್ತಾತರ ಕಾಲದಿಂದಲೂ ಯಾವುದೇ ಬರವಣಿಗೆಯಿಲ್ಲದೆ, ಮೌಖಿಕ (ಕಂಠಸ್ಥ)ವಾಗಿಯೇ ಸತ್ಯ ಹರಿಶ್ಚಂದ್ರನ ಕಥೆ, ರಾಮಾಯಣ ಮತ್ತು ಮಹಾಭಾರತ ಕಥೆಗಳು, ಗಂಗೆ–ಗೌರಿ ಕಥೆ ಇನ್ನಿತರ ಸುಮಾರು ಅರವತ್ತಕ್ಕೂ ಅಧಿಕ ಮಹಾಕಾವ್ಯಗಳು, ಮೂವತ್ತಕ್ಕೂ ಹೆಚ್ಚು ಸಣ್ಣ ಕಥೆಗಳು ಇವರ ಬಾಯಲ್ಲಿ ನಲಿಯುತ್ತವೆ. ಗಂಡುಗಲಿ ಕುಮಾರರಾಮು, ಕೃಷ್ಣಗೊಲ್ಲರ ಕಥೆ, ರೇಣುಕಾ ಯಲ್ಲಮ್ಮನ ಕಥೆ, ಬಲಿ ಚಕ್ರವರ್ತಿ ಕಾವ್ಯ, ಸ್ಯಾಸಿ ಚೆನ್ನಮ್ಮನ ಕಾವ್ಯ, ಬೊಬ್ಬಲಿ ನಾಗಿರೆಡ್ಡಿ ಕಾವ್ಯ, ಮರ್ವಾಡಿ ಸೇರಿ ಕಾವ್ಯ, ಆದೋನಿ ಲಕ್ಕಮ್ಮನ ಕಾವ್ಯ, ಜೈಸಿಂಗರಾಜನ ಕಾವ್ಯ ಮತ್ತು ಬಾಲನಾಗಮ್ಮನ ಕಾವ್ಯಗಳಂತಹ ಮಹಾಕಾವ್ಯಗಳನ್ನು ಸ್ತ್ರೀ–ಪುರುಷರು ಕೂಡಿ ತಂಬೂರಿ, ಗಗ್ಗರಿ, ಚಿಟಿಕೆ, ತಾಳಗಳ ಸಂಗೀತದ ಹಿಮ್ಮೇಳದೊಂದಿಗೆ ತಮ್ಮ ಕಂಚಿನ ಕಂಠದಿಂದ ಹಾಡುತ್ತ, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ನರ್ತಿಸುತ್ತ ತಮ್ಮ ಕಲಾ ಪ್ರದರ್ಶನ ನೀಡುತ್ತಾರೆ. ಅಲ್ಲದೆ ನಾಟಕಗಳನ್ನು ಪ್ರದರ್ಶನ ನೀಡುವುದರಲ್ಲೂ ಪ್ರವೀಣರಿವರು. ಬಾಲನಾಗಮ್ಮ, ದೇಶಿಂಗರಾಜ, ಮಹಾರಾಜ ಸತ್ಯಹರಿಶ್ಚಂದ್ರ, ನಳ ಚಕ್ರವರ್ತಿ ಇತರೆ ನಾಟಕಗಳನ್ನು ಆಡುವುದರಿಂದ ಅಪಾರ ಜನಮನ್ನಣೆ ಪಡೆದಿದ್ದಾರೆ.

ಬುಡ್ಗಜಂಗಮರು ಹಾಡುವ, ಪ್ರದರ್ಶಿಸುವ ಕಲೆ ಕಥನ ಕಾವ್ಯ (ಮಹಾಕಾವ್ಯ)ಗಳು ವಸ್ತು ವೈವಿಧ್ಯತೆಯಿಂದ ಕೂಡಿರುತ್ತದೆ. ಪ್ರದರ್ಶಿಸುವ ವೇಳೆ ವೀರ ಕಾವ್ಯಗಳಿದ್ದರೆ ರಣೋತ್ಸಾಹ, ಭಕ್ತಿ ಕಾವ್ಯ ಪ್ರದರ್ಶಿಸುವಾಗ ಪ್ರಶಾಂತ ತನ್ಮಯತೆ, ಹಾಸ್ಯ, ಉಲ್ಲಾಸ, ವೇದನೆಗೆ ತಕ್ಕಂತೆ ಭಾವದ ಏರಿಳಿತಗಳು ಜನಮಾನಸದಲ್ಲಿ ಅಚ್ಚೊತ್ತುವಂತೆ ಪ್ರದರ್ಶನ ನೀಡುತ್ತಾರೆ. ಪ್ರದರ್ಶನಗಳಲ್ಲಿ ಸಾಮಾನ್ಯವಾಗಿ ಗದ್ಯ–ಪದ್ಯ ಕಥನ ಶೈಲಿ ಕಂಡು ಬರುತ್ತದೆ. ಇವರಿಗೆ ಪೌರಾಣಿಕ, ಧಾರ್ಮಿಕ ಇಲ್ಲವೆ ಆಧುನಿಕ ಸಂಗತಿಯ ಒಂದು ಎಳೆ ಸಿಕ್ಕರೆ ಸಾಕು, ಅದನ್ನು ಸುಂದರವಾಗಿ ಅಭಿವ್ಯಕ್ತಿಸುವ ಕಲೆ ಕರಗತ ಮಾಡಿಕೊಳ್ಳುವರು. ವಸ್ತುವನ್ನು ಪರಿಣಾಮಕಾರಿಯಾಗಿ ಕೇಳುಗರನ್ನು ಮಂತ್ರ ಮುಗ್ಧರನ್ನಾಗಿಸುವ ಶಕ್ತಿ ಇರುತ್ತದೆ. ಬುರ್ರಕಥೆಗಳನ್ನು ಹಾಡುವಾಗ ನೃತ್ಯ, ಅಭಿನಯ ಕಥೆಯೊಂದಿಗೆ ಉಪಕಥೆ, ಅಡ್ಡಕಥೆ (ಬಯಲಾಟದಲ್ಲಿ ಸೋಗು), ವಿನೋದ, ವಿಡಂಬನೆ ಹೀಗೆ ಹತ್ತು ಹಲವು ಬಗೆಯ ವೈಶಿಷ್ಟ್ಯತೆಗಳನ್ನು ಅಳವಡಿಸಿಕೊಂಡು ಕಥೆಯನ್ನು ರಂಜನೀಯವಾಗಿ ಪ್ರಸ್ತುತ ಪಡಿಸುತ್ತಾರೆ. ಶೈವ–ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಕಥೆಗಳನ್ನು ಹೆಚ್ಚಾಗಿ ಆಡಿದರೂ, ಪ್ರಚಲಿತ ಸಾಮಾಜಿಕ ಘಟನೆಗಳನ್ನು ಆಧರಿಸಿ ಹೊಸ ಕಥೆಗಳನ್ನು ಕಟ್ಟಿ ಆಡುತ್ತಾರೆ.

ಬುಡ್ಗಜಂಗಮರು ಮಾಡುವ 'ತುಪಾಕಿ ರಾಮಣ್ಣ ವೇಷ' ಅಥವಾ 'ಪಿಟ್ಟಲದೊರೆ' ಎಂಬ ಏಕವ್ಯಕ್ತಿ ಅಭಿನಯ ತುಂಬ ಮನೋಜ್ಞವಾಗಿರುತ್ತದೆ. ಪ್ರೇಕ್ಷಕರಿಗೆ ಮನರಂಜನೆ ನೀಡುವುದೇ ಈ ಪ್ರದರ್ಶನ ಮುಖ್ಯ ಆಶಯವಾಗಿರುತ್ತದೆ. ಸಾಮಾನ್ಯವಾಗಿ ಇವರು ಹಾಕುವ ವೇಷಗಳಲ್ಲಿ ಆಂಜನೇಯ, ಭಸ್ಮಾಸುರ, ಸಾಕಲೇಷಂ, ಕಪ್ಪರಪಂಚು, ಜಂಗಮನ ವೇಷ, ದಾಸರವೇಷ, ಬಾಲಸಂತರ ವೇಷ ಮತ್ತು ಅರ್ಧನಾರೀಶ್ವರ ವೇಷಗಳು ಮುಖ್ಯವಾಗಿರುತ್ತವೆ. ಒಬ್ಬನೇ ವ್ಯಕ್ತಿ ಶಿವ ಹಾಗೂ ಪಾರ್ವತಿಯರ ಅರ್ಧರ್ಧ ಭಾಗ ವೇಷಧರಿಸಿಕೊಳ್ಳುವುದು ಅರ್ಧನಾರೀಶ್ವರ ವೇಷದ ವಿಶೇಷ. ಆಂಜನೇಯನ ವೇಷ ಹಾಕುವವನು ತೆಳು ಹಸಿರು ಬಣ್ಣ ಬಳಿದುಕೊಂಡು, ಕಣ್ಣಿನ ಉಬ್ಬುಗಳಿಗೆ ಬಿಳಿನಾರಿನ ಕೂದಲನ್ನು ಅಂಟಿಸಿಕೊಂಡು, ಹಣೆಯ ಮೇಲೆ ಎರಡು ಬಿಳಿನಾಮಗಳ ಮಧ್ಯದಲ್ಲಿ ಕೆಂಪು ನಾಮ ಹಚ್ಚಿಕೊಂಡು, ಬಿಳಿನಾರಿನ ಗಡ್ಡ ಹಾಗೂ ಕೆಂಪು ಬಟ್ಟೆ ದಿಂಡನ್ನು ತುಟಿಗೆ ಹಾಕಿಕೊಂಡು, ಸೊಂಟದ ಹಿಂದಿನ ಭಾಗಕ್ಕೆ ಕೂದಲಿನಿಂದ ತಯಾರಿಸಿದ ಬಾಲವನ್ನು ಕಟ್ಟಿಕೊಳ್ಳುವರು. ಬಲಗಾಲಿಗೆ ಕಡಗ ಮತ್ತು ಎಡಗಾಲಿಗೆ ಗೆಜ್ಜೆಸರ ಕಟ್ಟಿಕೊಂಡು ತಲೆಯಲ್ಲಿ ಕಿರೀಟವನ್ನು ಧರಿಸಿಕೊಂಡು ಜಾತ್ರೆ, ಸಂತೆ, ನಗರ, ಪೇಟೆಗಳ ಬೀದಿ ಬೀದಿಯಲ್ಲಿ ಭಿಕ್ಷಾಟನೆ ಮಾಡುತ್ತಾರೆ.

ಇನ್ನು ಬುಡ್ಗಜಂಗಮರು ಹೇಳುವ ಶಾಸ್ತ್ರ ಅಥವಾ ಭವಿಷ್ಯದ ಮೇಲೆ ಗ್ರಾಮೀಣ ಜನರು ನಂಬಿಕೆ ಹೊಂದಿದ್ದಾರೆ. ಇವರು ಹೇಳುವ ಶಾಸ್ತ್ರ ಅಥವಾ ಭವಿಷ್ಯದ ವಿಶೇಷವೆಂದರೆ, ತಾಳೆಗರಿ ಹೊತ್ತಿಗೆಯನ್ನು ಪಕ್ಕದಲ್ಲಿ ಇಟ್ಟುಕೊಂಡಿರುತ್ತಾರೆ. ಈ ಹೊತ್ತಿಗೆಯ ಪ್ರತಿ ಗರಿಯಲ್ಲೂ ದೈವ ಮತ್ತು ಹಲವು ದೃಷ್ಟಾಂತ ಹಾಗೂ

ಕೆಲವು ಪ್ರಾಣಿ, ಪಕ್ಷಿಗಳ ಚಿತ್ರಗಳು ಇರುತ್ತವೆ. ಇದರ ಜತೆ ಒಂದು ಹುಲ್ಲುಕಡ್ಡಿ, ಬಿದಿರಿನ ದಿಬ್ಬಣ ಇಲ್ಲವೆ ನವಿಲು ಗರಿಯನ್ನು ಇಟ್ಟಿರುತ್ತಾರೆ. ಶಾಸ್ತ್ರ ಕೇಳುವವರಿಗೆ ಹುಲ್ಲಿನ ಕಡ್ಡಿಯಿಂದ ತಾಳೆಗರಿಯ ಹೊತ್ತಿಗೆಯಲ್ಲಿ ಒಂದು ಗರಿಯನ್ನು ತೆಗೆಯಲು ಹೇಳುತ್ತಾರೆ. ಹೀಗೆ ತೆಗೆದಾಗ ಯಾವ ಚಿತ್ರ ಬರುವುದೋ ಆ ಚಿತ್ರದ ಆಧಾರದ ಮೇಲೆ ಜನರ ಭವಿಷ್ಯ ಹೇಳುತ್ತಾರೆ. ಲುಂಗಿ ಇಲ್ಲವೆ ಪಂಜಾ ಕಟ್ಟಿಕೊಂಡು, ತಲೆಗೆ ರುಮಾಲು ಸುತ್ತಿಕೊಂಡು, ಕಿವಿಗೆ ದೊಡ್ಡ ಲೋಲಕ್, ಹೆಗಲಿಗೆ ಜೋಳಿಗೆಯನ್ನು ಹಾಕಿಕೊಂಡು ಕೊಂಡಮಾಮ ವೇಷಧರಿಸಿ, ಇವರು ಭವಿಷ್ಯ (ಜ್ಯೋತಿಷ್ಯಶಾಸ್ತ್ರ, ಗಿಣಿಶಾಸ್ತ್ರ) ಹೇಳುತ್ತ ಊರಿಂದ ಊರಿಗೆ ತಿರುಗಿ ಜೀವನ ಸಾಗಿಸುತ್ತಾರೆ. ಇವರು ಪ್ರದರ್ಶಿಸುವ ವಿವಿಧ ರೀತಿಯ ಕಲೆಗಳಿಗೆ ಬೇಕಾಗುವ ಹನುಮಂತ, ಸೂರ್ಪನಖಿಯ ಮುಖವಾಡ, ಕುತ್ತಿಗೆ ಹಾಕಿಕೊಳ್ಳುವ ಸರಗಳು, ಡಾಬು, ಮೀಸೆ, ಗಡ್ಡ, ಕೇಶ ವಿನ್ಯಾಸ, ಹಾವಿನ ವಿನ್ಯಾಸ, ಬಿಲ್ಲು–ಬಾಣ, ತ್ರಿಶೂಲ, ಬತ್ತಳಿಕೆ, ಕಿರೀಟ, ಗದೆ ಮತ್ತು ತೋಳ ಭಟ್ಟಗಳು ಸೇರಿದಂತೆ ಎಲ್ಲ ಪರಿಕರಗಳನ್ನು ಇವರೇ ತಯಾರಿಸಿಕೊಳ್ಳುತ್ತಾರೆ. ಸಂಗೀತವಾದ್ಯಗಳಾದ ಏಕನಾದ, ತಂಬೂರಿ, ಚಿಟಿಕೆ ಮತ್ತು ಢಕ್ಕೆ ಇತ್ಯಾದಿ ಸಂಗೀತ ಸಲಕರಣೆಗಳನ್ನು ತಾವೇ ಸಿದ್ಧಪಡಿಸುತ್ತಾರೆ. ಇತ್ತೀಚಿನ ದಿನಮಾನಗಳಲ್ಲಿ ಹನುಮಂತನ ವೇಷ, ರಾಮ–ಲಕ್ಷ್ಮಣರ ವೇಷ, ಲವ–ಕುಶರ ವೇಷ ಹಾಕಿಕೊಂಡು ಹಾರ್ಮೋನಿಯಂ ನುಡಿಸುತ್ತ ನಗರಗಳ ರಸ್ತೆ, ಬಸ್ಸು ಮತ್ತು ರೈಲ್ವೆ ನಿಲ್ದಾಣ, ಗ್ರಾಮೀಣ ಪ್ರದೇಶಗಳಲ್ಲಿ ಜರುಗುವ ಜಾತ್ರೆ ಹಬ್ಬ–ಹರಿದಿನ ಮತ್ತು ಸಂತೆಗಳಲ್ಲಿ ಭಿಕ್ಷೆ ಕೇಳುತ್ತಾರೆ. ಇನ್ನು ಕೆಲವೊಮ್ಮೆ ಬಲಗೈಯಲ್ಲಿ ಏಕನಾದ, ಎಡಗೈಯಲ್ಲಿ ಚಿಟಿಕೆ ಹಿಡಿದು ರಾಮಶಾಸ್ತ್ರ ಹೇಳುವ ಕುರುಕುರು ಮಾಮ(ಕುರುಕೊಂಡಯ್ಯ)ನ ವೇಷಧರಿಸಿ, ಹಳ್ಳಿ ಬೀದಿಗಳಲ್ಲಿ, ಓಣಿ–ಕೇರಿಗಳಲ್ಲಿ ಮನೆಗಳ ಮುಂದೆ ನಿಂತು ಹಾಡುತ್ತ ಭಿಕ್ಷಾಟನೆ ಮಾಡುತ್ತಾರೆ.

**ಸಧ್ಯದ ಸ್ಥಿತಿಗತಿ**

ಈಗಿನ ಟಿ.ವಿ, ಸಿನಿಮಾ, ಮೋಬೈಲ್, ಕಂಪ್ಯೂಟರ್ ಇತ್ಯಾದಿ ಆಧುನಿಕ ಸಮೂಹ ಮಾಧ್ಯಮಗಳ ಭರಾಟೆಯಲ್ಲಿ ಬಹುರೂಪಿ ಕಲೆಗೆ ಮಹತ್ವ ಕಡಿಮೆಯಾಗಿದೆ. ಹಸಿವಿನ ಒಡಲು ತುಂಬಿಕೊಳ್ಳಲು ಭಿಕ್ಷೆ ಬೇಡುವುದು, ಚಿಂದಿ ಹಾಯುವುದು, ಮದುವೆ–ಮುಂಜಿಯಲ್ಲಿ ಇತರ ಶುಭ ಕಾರ್ಯಗಳಲ್ಲಿ ಮುಸುರೆ ತಿಕ್ಕುವುದು, ಜಾತ್ರೆಗಳಲ್ಲಿ ದೇವರ ಪೋಟೋ ಮಾರುವುದು, ಮಕ್ಕಳ ವಿವಿಧ ಆಟಿಕೆಗಳನ್ನು ಮಾರುತ್ತಾರೆ. ಇವರಲ್ಲಿ ಸಾಮಾಜಿಕವಾಗಿ ಇಂದಿಗೂ ಬಹುಪತ್ನಿತ್ವ, ಬಾಲ್ಯ ವಿವಾಹ ಪದ್ಧತಿ ಕಾಣುತ್ತೇವೆ. ಉಪವಾಸ, ವನವಾಸ ಅನುಭವಿಸುತ್ತಿರುವ ಇವರನ್ನು ಸಮಾಜದಲ್ಲಿ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಸರಕಾರ ಅನೇಕ ಸೌಲಭ್ಯಗಳನ್ನು ಒದಗಿಸುತ್ತಿದೆ. ಇದರಿಂದ ಸ್ವಲ್ಪಮಟ್ಟಿಗೆ ಅವರ ಬದುಕು ಉಸಿರಾಡುವಂತಾಗಿದೆ. ಇಂತಹ ಸಮಸ್ಯೆ–ಸವಾಲುಗಳ ನಡುವೆಯೂ ಬುರ್ರಕಥಾ ಈರಮ್ಮನಂತಹ ಮಹಿಳಾ ಲೋಕದಲ್ಲಿ ಹಾಡುಗಳಿವೆ, ಕತೆಗಳಿವೆ, ಮಹಾಕಾವ್ಯಗಳಿವೆ. ಇದರ ಜತೆ ಜತೆಗೆ ಹಸಿವು, ಬಡತನ, ನಿರುದ್ಯೋಗ ಮತ್ತು ಭಿಕ್ಷಾಟನೆಯಂತಹ ಅನೇಕ ಸಮಸ್ಯೆಗಳು ಇವರನ್ನು ಬೆಂಬಿಡದೆ ಕಾಡುತ್ತಿವೆ. ಶಿಕ್ಷಣ ಪಡೆದು ಅಜ್ಞಾನ, ಅನಕ್ಷರತೆಯಿಂದ ಹೊರ ಬರಲು ಮಹಿಳೆಯರಿಗೆ ಇನ್ನು ಸಾಧ್ಯವಾಗುತ್ತಿಲ್ಲ.

ವಿಜ್ಞಾನ ತಂತ್ರಜ್ಞಾನ ಬೆಳವಣಿಗೆ ಮತ್ತು ಸಂವಹನ ಮಾಧ್ಯಮಗಳ ಪ್ರಭಾವದಿಂದ ಬುಡ್ಗ ಜಂಗಮ ಕಲಾವಿದರನ್ನು ನಮ್ಮ ಆಧುನಿಕ ನಾಗರಿಕ ಸಮಾಜ ಭಿಕ್ಷುಕರಂತೆ ಕಾಣುತ್ತಿದೆ. ಈ ಪಾರಂಪರಿಕ ಕಲಾವಿದರು ಕಲೆಯನ್ನೇ ಉಸಿರಾಗಿಸಿಕೊಂಡಿದ್ದಾರೆ. ಆದರೆ ಇಂದು ಜೀವನ ನಿರ್ವಹಣೆಗೆ ಅನಿವಾರ್ಯವಾಗಿ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿದ್ದಾರೆ. ತಮ್ಮ ಕಲೆಗೆ ಮಹತ್ವ, ಕಲಾವಿದರಿಗೆ ಪ್ರೋತ್ಸಾಹ ಕಡಿಮೆಯಾದ ಮೇಲೆ ಇತ್ತೀಚಿಗೆ ಕೆಲವರು ಅಲೆಮಾರಿ ಜೀವನವನ್ನು ಪೂರ್ಣಬಿಡದೆ, ಒಂದೆಡೆ ನೆಲೆಸಲು ಪ್ರಯತ್ನಿಸುತ್ತಿದ್ದಾರೆ. ಅಲೆಮಾರಿಗಳಾಗಿ ಊರೂರು ಅಲೆಯುತ್ತ ಜೀವನ ಸಾಗಿಸಿಕೊಂಡು ಬಂದಿರುವ ಬುಡ್ಗಜಂಗಮರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಹಿಂದುಳಿದಿದ್ದಾರೆ. ಇಂತಹ ಅಲಕ್ಷಿತ ಸಮುದಾಯ ಕುರಿತು ವಿಶ್ವವಿದ್ಯಾಲಯಗಳು, ಜಾನಪದ ಅಕಾಡೆಮಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸರಕಾರ ಹಾಗೂ ಸರಕಾರೇತರ ಸಂಘ–ಸಂಸ್ಥೆಗಳು ಆಳವಾದ ಅಧ್ಯಯನ ಕೈಗೊಳ್ಳಬೇಕಿದೆ. ಮಾನವ ಸಂಬಂಧಗಳು, ಮಾನವೀಯ ಮೌಲ್ಯಗಳು ಹಾಗೂ ಜನಪದ ಕಲೆಗಳು ಕಣ್ಮರೆಯಾಗುತ್ತಿರುವ ಇಂದಿನ ದಿನಗಳಲ್ಲಿ ಸಮಾಜ ವಿಜ್ಞಾನಿಗಳು, ಸರಕಾರ ಜತೆಗೂಡಿ ಇವರ ಸಮಸ್ಯೆಗೆ ಪರಿಹಾರ ಹುಡುಕುವ ಕೆಲಸ ಅಗತ್ಯವಾಗಿ ಆಗಬೇಕಿದೆ. ಅದರೂ ಕರ್ನಾಟಕ ಸರಕಾರ ಅವರ ಸರ್ವಾಂಗೀಣ ಏಳಿಗೆಗಾಗಿ ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಿದೆ. ಮೀಸಲಾತಿಯಿಂದ ಶಿಕ್ಷಣ ಪಡೆದು, ವಿದ್ಯಾವಂತರಾಗಿ ಉದ್ಯೋಗ, ರಾಜಕೀಯದಲ್ಲಿ ದಾಪುಗಾಲು ಇಡುತ್ತಿರುವುದು ಆಶಾದಾಯಕ ಸಂಗತಿಯಾಗಿದೆ.

**ಕೊನೆಯ ಮಾತು**

ಅಲೆಮಾರಿ ಬುಡ್ಗಜಂಗಮರು ತಮ್ಮ ವಿಶಿಷ್ಟ ಸಂಪ್ರದಾಯ, ಆಚರಣೆ, ನಂಬಿಕೆ, ಭಾಷೆ, ಆಹಾರ ಪದ್ಧತಿ, ಉಡುಗೆ–ತೊಡುಗೆಗಳು, ಮದುವೆ, ಕಲೆಗಳ ಮೂಲಕ ಕನ್ನಡ ನಾಡಿಗೆ ತಮ್ಮದೇ ಆದ ಸಾಂಸ್ಕೃತಿಕ ಕೊಡುಗೆಯನ್ನು ನೀಡಿದ್ದಾರೆ. ಈ ಸಮುದಾಯದ ವಿಧವೆಯರಿಗೆ ಸಕಾಲಕ್ಕೆ ಮಾಸಾಶನ ದೊರೆಯುತ್ತಿಲ್ಲ. ಇನ್ನು ಪುರುಷರು ಕೂಡ ಸುಡು ಬಿಸಿಲನ್ನು ಲೆಕ್ಕಿಸದೆ ಊರಿಂದೂರಿಗೆ ಅಲೆಯುತ್ತಿರುತ್ತಾರೆ. ಹಗಲುವೇಷ ಕಲೆಯನ್ನು ಪ್ರಸ್ತುತ ಪಡಿಸುತ್ತ, ಊರೂರು ತಿರುಗುತ್ತ ಜಾನಪದ ಗೀತೆ, ಕಥನಗೀತೆ, ರಾಮಾಯಣ, ಮಹಾಭಾರತ ಮತ್ತು ಬುರ್ರಕಥೆಗಳನ್ನು ಆಡುತ್ತ, ನಾಟಕ ಮಾಡುತ್ತ ಜನರು ನೀಡುವ ದವಸಧಾನ್ಯ, ಹಣವನ್ನು ಸ್ವೀಕರಿಸುತ್ತಾರೆ. ಬಣ್ಣ ಬಣ್ಣದ ವೇಷಭೂಷಣಗಳನ್ನು ಧರಿಸಿ, ಜನರನ್ನು ರಂಜಿಸಿ ಸಂತೋಷ ಪಡಿಸುವ ಇವರು ಮಾತ್ರ ಬಡತನದ ನೋವುಂಡು ಬದುಕುತ್ತಿದ್ದಾರೆ. ಶಿಕ್ಷಣದ ಕೊರತೆ ಜತೆಗೆ ಸಾಮಾಜಿಕ ಶೋಷಣೆಯನ್ನು ಅನುಭವಿಸುತ್ತಿರುವರು. ಇವರ ಕಲೆಯನ್ನು ಪ್ರೋತ್ಸಾಹಿಸಲು ಸರಕಾರ ಮಾಸಾಶನ ನೀಡುವ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದರೆ, ತಕ್ಕಮಟ್ಟಿಗೆ ಇವರ ಜೀವನಮಟ್ಟ ಸುಧಾರಣೆ ಕಾಣಲು ಸಾಧ್ಯವಾಗುತ್ತದೆ.

**ಆಕರಗಳು**


1. ಡಾ.ಅರುಣಾ ಸುಲ್ತಾನಪೂರೆ. ಪ್ರೇರಕ ಮಹಿಳೆಯರು, ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಪ್ರಕಾಶನ, ಕಲಬುರಗಿ, 2018.
2. ಡಾ.ಎಚ್.ಜೆ.ಲಕ್ಕಪ್ಪಗೌಡ. ಜಾನಪದ ಗಂಗೋತ್ರಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 1997.
3. ಡಾ.ಅಮ್ಮಸಂದ್ರ ಸುರೇಶ, "ಕಲೆಯನ್ನೇ ಉಸಿರಾಗಿಸಿಕೊಂಡ ಬುಡ್ಗಜಂಗಮರು", ಉದಯಕಾಲ, ಕನ್ನಡ ದಿನಪತ್ರಿಕೆ, 6ನೇ ಮಾರ್ಚ್ 2022.
4. ನೆಟ್ ಮಾಹಿತಿ: https://m.dailyhunt.in.